Code No : JH

# ಜಿಲ್ಲಾ ಮಟ್ಟದ ದ್ವಿತೀಯ ಪಿ.ಯು.ಸಿ. ಪೂರ್ವ ಸಿದ್ಧತಾ ಪರೀಕ್ಷೆ, ಜನವರಿ-2023

ಅವಧಿ : 3 ಗಂಟೆ 15 ನಿಮಿಷಗಳು — ವಿಷಯ : ಕನ್ನಡ (01) — ಗರಿಷ್ಠ ಅಂಕಗಳು : 100

## ಅ – ಬಹು ಆಯ್ಕೆ ಪ್ರಶ್ನೆ ವಿಭಾಗ

I (ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. : 10 x 1 = 10

1) ಮಯತನೂಜೆ ಎಂದರೆ ಯಾರು ? ಅ) ಸುಮಿತ್ರೆ ಆ) ಶೂರ್ಪನಖಿ ಇ) ಮಂಡೋದರಿ ಈ) ಸೀತೆ
2) ಬಸವಣ್ಣನವರ ಅಂಕಿತ ಯಾವುದು ? ಅ) ಗುಹೇಶ್ವರ ಆ) ಕೂಡಲ ಸಂಗಮದೇವ ಇ) ಚೆನ್ನಮಲ್ಲಿಕಾರ್ಜುನ ಈ) ವಿಶ್ವೇಶ್ವರಾ
3) ಅರಣ್ಯವಾಸದಲ್ಲಿದ್ದಾಗ ದ್ರೌಪದಿಯನ್ನು ಎಳೆದೊಯ್ದವರಾರು ? ಅ) ಕೀಚಕ ಆ) ಸೈಂಧವ ಇ) ದುಶ್ಯಾಸನ ಈ) ದುರ್ಯೋಧನ
4) ತೈಲ ತೀರಿದ್ದು ಹೇಗೆ ತಿಳಿಯುತ್ತದೆ ?
ಅ) ಕತ್ತಲಾದಾಗ ಆ) ಕುಮಟು ವಾಸನೆ ಬಂದಾಗ ಇ) ದೀಪ ಆರಿದಾಗ ಈ) ಬತ್ತಿ ತೀರಿದಾಗ
5) ಮಾರ್ಷ್ ವಾಲ್‌ಪರೈಗೆ ಬಂದುದು ಯಾವಾಗ ? ಅ) 1890 ಆ) 1934 ಇ) 1897 ಈ) 1912
6) ನಮ್ಮ ದೇಶದಲ್ಲಿ ಖಿಲವಾಗಿ ಹೋದ ಧರ್ಮ ಯಾವುದು ? ಅ) ಜೈನ ಆ) ಕ್ರಿಶ್ಚಿಯನ್ ಇ) ಇಸ್ಲಾಂ ಈ) ಬೌದ್ಧ
7) ಕಲಾಂ ಅವರು ರಾಷ್ಟ್ರಪತಿ ಸ್ಥಾನಕ್ಕೆ ಆಯ್ಕೆಯಾದ ಸುದ್ದಿ ತಿಳಿದಾಗ ಅವರು ಎಲ್ಲಿದ್ದರು ?
ಅ) ಬೆಂಗಳೂರು ಆ) ಮುಂಬೈ ಇ) ಚೆನ್ನೈ ಈ) ದೆಹಲಿ
8) ನಿರೂಪಕರ ಇಕಾಲಿಜಿಸ್ಟ್ ಗೆಳೆಯ ಯಾರು ? ಅ) ಪ್ರಕಾಶ ಆ) ರಮೇಶ ಇ) ದುರ್ಗಪ್ಪ ಈ) ನಾಗರಾಜ
9) ಟೆಲಿಫೋನ್ ಸಿಬ್ಬಂದಿ ಯಾರ ವಿರುದ್ಧ ಮುಷ್ಕರ ಹೂಡಿದರು ?
ಅ) ಪಿ.ಡಬ್ಲ್ಯುಡಿ. ಆ) ಅರಣ್ಯ ಇಲಾಖೆ ಇ) ಕೃಷಿ ಇಲಾಖೆ ಈ) ವಿದ್ಯುತ್ ಇಲಾಖೆ
10) ಆನೆ ಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು ?
ಅ) ಆನೆಯಿಂದ 3 ಜನ ಪ್ರಾಣ ಕಳೆದುಕೊಳ್ಳುತ್ತಾರೆ ಆ) ಆನೆಯಿಂದ 10 ಜನ ಪ್ರಾಣ ಕಳೆದುಕೊಳ್ಳುತ್ತಾರೆ
ಇ) ಆನೆಯಿಂದ 5 ಜನ ಪ್ರಾಣ ಕಳೆದುಕೊಳ್ಳುತ್ತಾರೆ ಈ) ಆನೆಯಿಂದ 7 ಜನ ಪ್ರಾಣ ಕಳೆದುಕೊಳ್ಳುತ್ತಾರೆ

(ಆ) 11) ಹೊಂದಿಸಿ ಬರೆಯಿರಿ :- 5 x 1 = 5

| | |
|---|---|
| ಅ. ಪುಲಿಗೆರೆ ಸೋಮನಾಥ | 1. ಜಿ.ಎಸ್. ಶಿವರುದ್ರಪ್ಪ |
| ಆ. ಕರ್ನಾಟಕ ಸಂಗೀತ ಪಿತಾಮಹ | 2. ದ.ರಾ. ಬೇಂದ್ರೆ |
| ಇ. ಹಬ್ಬಲಿ ಅವರ ರಸಬಳ್ಳಿ | 3. ಹರಹರ ಶ್ರೀ ಚೆನ್ನಸೋಮೇಶ್ವರಾ |
| ಈ. ಬೆಳಗು ಜಾವ | 4. ಒಮ್ಮೆ ನಗುತ್ತೇವೆ |
| ಉ. ಸುಕನ್ಯಾ ಮಾರುತಿ | 5. ಗರತಿಯ ಹಾಡು |
| | 6. ಪುರಂದರ ದಾಸರು |

(ಇ) 12) ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ :- 5 x 1 = 5
(ಮನೋರಮೆ, ಒಕ್ಕಲುಮಕ್ಕಳನ್ನು, ನಿಶಾ ಶರ್ಮಾ, ಡಾ. ತಿಮ್ಮಪ್ಪ, ಚಹಾ)

ಅ) ಮುಟ್ಟಿಸಿಕೊಂಡವನು ಕತೆಯಲ್ಲಿ ಬರುವ ಸರ್ಕಾರಿ ಆಸ್ಪತ್ರೆಯ ವೈದ್ಯರ ಹೆಸರು______
ಆ) ಕಲಿಯುಗದ ಅಮೃತ______ ಇ) ಕನ್ನಡವು ಕಸ್ತೂರಿಯಲ್ಲವೇ ಎಂದವರು______
ಈ) ಧಣಿ ಎಂದಿಗೂ ______ನಂಬುವುದಿಲ್ಲ. ಉ) ದುರಾಸೆಯ ಹುಡುಗನನ್ನು ನಿರಾಕರಿಸಿದವರು______

## ಆ – ವಿಭಾಗ

II ಅ) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ : 4 x 2 = 8

13) ಬಹುರೂಪಿಣಿ ವಿದ್ಯೆಯು ರಾವಣನಿಗೆ ಏನೆಂದು ಆಶ್ವಾಸನೆಯಿತ್ತಿತ್ತು ?
14) ಸೂರ್ಯ ಮತ್ತು ದೀಪಗಳಿಂದಾಗುವ ಉಪಯೋಗಗಳಾವುವು ? 15) ಯಾರಿಗೆ ಷಡ್ರಸಾನ್ನವಿಕ್ಕಿ ಉಪಯೋಗವಿಲ್ಲ ? ಏಕೆ ?
16) ಹಡೆದ ತಂದೆ ತಾಯಿಯರ ಮಹತ್ವ ತಿಳಿಸಿರಿ. 17) ಕವಯಿತ್ರಿ ಸುಕನ್ಯಾ ಮಾರುತಿಯವರು ಯಾವುದಕ್ಕೆ ಧಿಕ್ಕಾರ ಹಾಕಿದ್ದಾರೆ ?

ಆ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. :- 3 x 2 = 6

18) ಕೊನೆಯಲ್ಲಿ ಬಸಲಿಂಗನಿಗೆ ಏನೆಂದು ನಿಶ್ಚಿತವಾಗತೊಡಗಿತ್ತು ? 19) ಬ್ರಿಟಿಷರು ಬರುವ ಮೊದಲು ವಾಲ್‌ಪರೈ ಹೇಗಿತ್ತು ?
20) ಕರ್ನಾಟಕದಲ್ಲಿ ಕನ್ನಡಕ್ಕೆ ಯಾವ ಸ್ಥಾನವಿರಬೇಕೆಂದು ಹಾಮಾನಾ ಅಪೇಕ್ಷಿಸಿದ್ದಾರೆ ?
21) ಹಳ್ಳಿಯ ಚಹಾದ ಅಂಗಡಿಯೆಂದರೆ ಹೇಗಿರುತ್ತದೆ ?

ಇ) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :- 4 x 2 = 8

22) ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು ? 23) ಕಾಡಾನೆಗಳ ಹಾವಳಿಗೆ ಪ್ರಕಾಶ್ ನೀಡಿದ ಕಾರಣಗಳೇನು ?
24) ಡ್ರೈವರ್‌ನ ತಲೆ ಜಜ್ಜಿ ಹೋದದ್ದು ಹೇಗೆ ? ಅದಕ್ಕೆ ಆನೆ ಕಾರಣವೇ ?
25) ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ ?
26) ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು ?

## ಇ – ವಿಭಾಗ

III ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ :– 2x3=6

27) ಹುರುಳಿಲ್ಲದೊಡೆ ಕುಡಿವೆನು ಘೋರತರ ವಿಷವ.

28) ಮರಣ ಬಂದೀತು ಕ್ಷಣವು ಉರುಳಿ 29) ಬಂದೇ ತೀರುತ್ತದೆ ದೈವೀ ರಾಜ್ಯ.

ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ :– 1x3=3

30) ಈ ಮುಟ್ಟುವಿಕೆ ನಾನು ಊಹಿಸದೇ ಇದ್ದದ್ದನ್ನು ಮಾಡಿದೆ 31) ಸೀತಾಪಹರಣ ಕಥನದೊಳ್ ಬಯಕೆಯೆ ?

ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ :– 1x3=3

32) ಕುಶಾಲಿಗಂತ ಸೊಂಡಿಲು ಬೀಸಿದರೆ ಸಾಕಲ್ಲ. 33) ಕೋವಿ ಸಿಕ್ಕಿದೆ, ಆದರೆ ಹೆಣ ಸಿಗಲಿಲ್ಲ.

## ಈ – ವಿಭಾಗ

IV ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ :– 2 x 4=8

34) ರಕ್ಷಿಸಬೇಕಾದವರೇ ಭಕ್ಷಕರಾದರೆ ಒದಗುವ ವಿಘಟನೆಯನ್ನು ಬರ್ಸ್ಟ್ಲನವರು ಹೇಗೆ ಚಿತ್ರಿಸಿದ್ದಾರೆ ?

35) ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.

36) ವೀರ, ಮಂತ್ರಿ, ರಾಜ ಮತ್ತು ಯೋಗಿಗಳಿಗೆ ಇರಬೇಕಾದ ಅರ್ಹತೆಗಳೇನು ?

37) 'ಮುಂಬೈ ಜಾತಕ' ದಲ್ಲಿ ಮಗು ಕಲಿತಿದ್ದನ್ನು ಮತ್ತು ವಿದ್ಯಾಭ್ಯಾಸ ಮಾಡುವ ವಿವರಗಳನ್ನು ವಿಶ್ಲೇಷಿಸಿ.

ಆ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ :– 1 x 4 = 4

38) ಸೀತಾ ಎಂಬ ಗೆಳತಿಯ ಗುಣ–ಸ್ವಭಾವವನ್ನು ಲೇಖಕಿ ಹೇಗೆ ಚಿತ್ರಿಸಿದ್ದಾರೆ ?

39) ಚಿನ್ನಮ್ಮ ಬೆಳ್ಳಿಲೋಟವನ್ನು ಮತ್ತೆ ಹೊಳೆಗೆ ಎಸೆಯಲು ಕಾರಣವೇನು ? ವಿಶ್ಲೇಷಿಸಿ.

40) ತಾಯಿ–ತಂದೆ ಶಿಕ್ಷಕರು ಸೇರಿ ಆದ ತ್ರಿಭುಜವೇ ಉತ್ತಮ ಬದುಕಿಗೆ ಆದರ್ಶ ಮಾದರಿ ಹೇಗೆ ? ವಿವರಿಸಿರಿ.

ಇ) ಈ ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ :– 1 x 4 = 4

41) ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ ? ವಿವರಿಸಿ.

42) ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡರ ಆನೆ ಕಾರಣವೇ ? ವಿವರಿಸಿ.

43) ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು ?

## ಉ – ವಿಭಾಗ

VI ಅ) ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ :– 1 x 5 = 5

44) ಸಮಧಿಕರಾರ್ ಜಗತ್ತ್ರಯದೊಳೆನ್ನನಗೆನ್ನೊಳಿದಿರ್ಚುವನ್ನರಾರ್
ಸಮರದೊಳೆಂದು ತನ್ನ ಭುಜದಂಡಮನೀಕ್ಷಿಸಿ ಜಾನಕೀಮುಖಾ
ಬ್ಜಮನವಲೋಕಿಸಲ್ ಕರಮೆ ಕಾತರನಾಗಿ ವಿಯಚ್ಚರಾಧಿಪಂ
ಪ್ರಮದವನಕ್ಕೆ ಬಂದನರಲಂಬುಗಳಿಲ್ಲದ ಕಾಮನೆಂಬಿನಂ.

ಅಥವಾ

ಹಂಚಿಕೊಂಡಿದ್ದಾರೆ ಅಪ್ಪ ಅಮ್ಮನನ್ನು
ಇಲ್ಲಿ ದೊಡ್ಡಮಗನ ತಾವಲ್ಲಿ ಮುದುಕಿ, ಸದ್ಯ ಕನ್ನಡ ದೇಶ
ಮಗ ಸೊಸೆ ಹೊರಗೆ ಹೋದಾಗಲಾದರೂ ನಾಲ್ಕು ಮಾತಾಡಿ
ತೀರಿಸಿಕೊಳ್ಳುತ್ತಾಳೆ ಬಾಯಿತುರಿಕೆ, ಪಾಪ ಮುದುಕ ದೂರದ
ಅಸ್ಸಾಮಿನಲ್ಲಿ, ಅಲ್ಲಿಯ ಮಾತು ಅವನಿಗೆ ಸಸೇಮಿರ ಬರದು.

## ಭಾಷಾಭ್ಯಾಸ

VI ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ :– 6 x 2 = 12

45) ಎರಡು ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ. : ಕರ, ನೆನೆ, ಕಳೆ

46) ಎರಡು ಪದಗಳಿಗೆ ತತ್ಸಮ ರೂಪ ಬರೆಯಿರಿ : ಗೊಂಗೆ, ಬೀರ, ಜಸ

47) ಎರಡು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ : ಹಿತ್ತಾಳೆ ಕಿವಿ, ಎಳ್ಳುನೀರು ಬಿಡು, ದಾರಿದೀಪ

48) ಎರಡು ಪದಗಳಿಗೆ ಕಾಲಸೂಚಕಗಳನ್ನು ಬರೆಯಿರಿ : ಬರುತ್ತಾರೆ, ಹೋದರು, ನೋಡಿದನು

49) ಎರಡು ಪದಗಳಿಗೆ ನಿಷೇದಾರ್ಥ ರೂಪಗಳನ್ನು ಬರೆಯಿರಿ. : ಬರುವನು, ನಡೆಯುತ್ತಾಳೆ, ಕಂಡರು

50) ಎರಡು ಪದಗಳ ವಿಭಕ್ತಿಯನ್ನು ಹೆಸರಿಸಿ : ಧರೆಯೊಳ್, ಮುದುಕಿಗೆ, ಅದೃಷ್ಟದಿಂದ

51) ಎರಡು ಪದಗಳಿಗೆ ಗುಣವಾಚಕಗಳನ್ನು ಬರೆಯಿರಿ. : ಹಸಿರುಕಂಬಳಿ, ಪೊಲ್ಲವಾರ್ತೆ, ಸುಣ್ಣದ ಹರಳು

ಆ) ಯಾವುದಾದರೂ ಒಂದನ್ನು ಕುರಿತು ಪ್ರಬಂಧ ಬರೆಯಿರಿ : 1 x 5 = 5

52) ಕ್ರೀಡೆ ಮತ್ತು ನಮ್ಮ ಆರೋಗ್ಯ ಅಥವಾ ತ್ಯಾಜ್ಯ ವಸ್ತುಗಳ ನಿರ್ವಹಣೆಯ ಸಮಸ್ಯೆ

ಇ) ಪತ್ರಲೇಖನ : ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ : 1 x 4 = 4

53) ನೀವು ಓದಿದ ಪುಸ್ತಕವನ್ನು ಕುರಿತು ಗೆಳೆಯ/ಗೆಳತಿಗೆ ಪತ್ರ ಬರೆಯಿರಿ. ಅಥವಾ
ಶೈಕ್ಷಣಿಕ ಸಾಲ ಸೌಲಭ್ಯವನ್ನು ಕೋರಿ ಬ್ಯಾಂಕಿನ ವ್ಯವಸ್ಥಾಪಕರಿಗೆ ಪತ್ರ ಬರೆಯಿರಿ.

ಈ) ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿರಿ : 1 x 4 = 4

54) ಊರು ಉಪಕಾರವರಿಯದು, ಹೆಣ ಸಿಂಗಾರವರಿಯದು ಅಥವಾ ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ

***************